**ಪಿ.ಡಬ್ಲ್ಯುಃ 1**

**ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಿಸಲಾಯಿತು.**

**ದಿನಾಂಕಃ 24-06-2025**

**ಪಾಟೀಸವಾಲುಃ- 2ನೇ ಎದ್ರುದಾರ ಪರ ಶ್ರೀ ಎನ.ಇ.ಎಚ್. ವಕೀಲರಿಂದ,**

ಅಪಘಾತ ಆದ ದಿನ ನಾನು ಬೈಕನಲ್ಲಿ ಶಿರಾಲಿ ಭಟ್ಕಳದ ಕಡೆಗೆ ಬರುತ್ತಿದ್ದೆನು. ನನ್ನ ಬೈಕ ನಂಬರ ಕೆಎ/47-0065 ಆಗಿರುತ್ತದೆ. ಸದ್ರಿ ವಾಹನಕ್ಕೆ Future General Insurance Company ವಿಮಾ ಇತ್ತು. ನನಗೆ ಡಿ.ಎಲ್ ಇರುತ್ತದೆ. ಅಪಘಾತವು ದಿನಾಂಕ 19/10/2017 ರಂದು ಆಗಿರುತ್ತದೆ ಎಂದರೆ ಸರಿ. ನನಗೆ ಡಿಕ್ಕಿ ಪಡಿಸಿದ ಬೈಕ ಸಹ Splender ವಾಹನ ಆಗಿರುತ್ತದೆ. ಸದ್ರಿ ವಾಹನದ ಬೈಕ ನಂಬರ ಕೆಎ/47-ಇ-6712 ಎಂದರೆ ಸರಿ. ಸದ್ರಿ ಅಪಘಾತದ ಸಂಬಂಧ ಮಂಗಳಾ ಮಂಜುನಾಥ ನಾಯ್ಕ ಎನ್ನುವವರು ಭಟ್ಕಳದ ಶಹರ ಪೋಲೀಸ ಠಾಣೆಯಲ್ಲಿ ದೂರು ಸಲ್ಲಿಸಿರುತ್ತಾರೆ ಎಂದರೆ ಸರಿ. ಸದ್ರಿ ಪೋಲೀಸರು ಕ್ರೈಮ ನಂಬರ 248/2017 ರಂತೆ ಪ್ರಕರಣ ದಾಖಲಿಸಿದ್ದಾರೆ ಎಂದರೆ ಸರಿ. ಪೋಲೀಸರು ಸದ್ರಿ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪೊಲಿಸರು ಅಪಘಾತವು ನನ್ನ ತಪ್ಪಿನಿಂದ ಆಗಿದೆ ಎಂದು ನ್ಯಾಯಾಲಯಕ್ಕೆ ನನ್ನ ವಿರುದ್ಧ ದೊಷಾರೊಪಣಾ ಪತ್ರ ಸಲ್ಲಿಸಿದ್ದಾರೆ ಎಂದರೆ ಸರಿ. ಅದು ಪ್ರಧಾನ ಸಿವಿಲ್ ನ್ಯಾಯಾಲಯ ಸಿಸಿ ನಂಬರ 584/2018 ಆಗಿತ್ತು ಅದರಲ್ಲಿ ನಾನು ಆರ.ಜಿ.ನಾಯ್ಕ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ತಪ್ಪು ಒಪ್ಪಿಕೊಂಡು ದಂಡ ಕಟ್ಟಿರುತ್ತೇನೆ ಎಂದರೆ ಸರಿ. ಅಪಘಾತವು ನನ್ನ ತಪ್ಪಿನಿಂದ ಆಗಿರುವುದರಿಂದ 2ನೇ ಎದ್ರುದಾರ ನನಗೆ ಪರಿಹಾರ ಕೊಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲ ವಿಚಾರ ಗೊತ್ತಿದ್ದರೂ ಸಹ ದುರುದ್ದೇಶದಿಂದ ಈ ಸುಳ್ಳು ಪ್ರಕರಣ ದಾಖಲಿಸಿದ್ದೆನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಿಸಲಾಯಿತು)**

**ಓ ಹೇ ಕೇ ಸರಿ ಇದೆ.**

**ಸಹಿ ಇದೆ.**

**ಮೆಂಬರ್ ಎಡಿಶನಲ್ ಎಂ.ಎ.ಸಿ.ಟಿ. ಮತ್ತು**
**ಹಿರಿಯ ಸಿವಿಲ್ ನ್ಯಾಯಾಧೀಶರು, ಭಟ್ಕಳ.**